# ಯಂತ್ರದಾಸ್ಯ

ಚಾರ್ಲಿ ಚಾಪ್ಲಿನ್ 1936 ರಲ್ಲಿ ನಿರ್ಮಿಸಿದ 'ಮಾಡರ್ನ್ ಟೈಮ್ಸ್' ಎಂಬ ಚಲನಚಿತ್ರ ಪ್ರಾಯಃ ಸಿನೆಮಾ ಜಗತ್ತಿನ ಇತಿಹಾಸದಲ್ಲೇ ಒಂದು ಮೈಲಿಗಲ್ಲು ಎನ್ನಬಹುದು. ತಾನೇ ಸೃಷ್ಟಿಸಿದ ಯಂತ್ರಗಳಿಂದಾಗಿ ಆಧುನಿಕ ಮಾನವ ಎಷ್ಟೆಲ್ಲ ಫಜೀತಿಗೆ ಒಳಗಾಗುತ್ತಾನೆಂಬುದನ್ನು ಈ ಚಿತ್ರದಲ್ಲಿ ಚಾಪ್ಲಿನ್ ತನ್ನದೇ ಆದ ಉತ್ಪ್ರೇಕ್ಷಿತ ಶೈಲಿಯಲ್ಲಿ ನಮ್ಮೆದುರು ತೋರಿಸುತ್ತಾನೆ. ಸ್ವಂತಿಕೆಯನ್ನು ಸಂಪೂರ್ಣವಾಗಿ ಕಳೆದುಕೊಂಡು ಯಂತ್ರಗಳ ನಿಯಂತ್ರಣಕ್ಕೆ ಒಳಗಾಗಿರುವ ಆಧುನಿಕ ಮಾನವನ ಬದುಕನ್ನು ಕುರಿತು ವಿಡಂಬನೆ, ವಿಷಾದಗಳೆರಡೂ ಈ ಚಿತ್ರದಲ್ಲಿವೆ. 'Modern Man is the viction of the very instruments he values most' ಎಂಬ ಹೇಳಿಕೆಗೆ ಚಾರ್ಲಿ ಚಾಪ್ಲಿನ್‌ನ ಈ ಚಿತ್ರ ಭಾಷ್ಯ ಬರೆಯುವಂತಿದೆ.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಿಂದ ಮನುಷ್ಯ ಯಂತ್ರ ನಿರ್ಮಾಣದತ್ತ ಹೆಚ್ಚು ಹೆಚ್ಚು ಗಮನ ಹರಿಸಲು ತೊಡಗಿದ. ಯಂತ್ರ ನಿರ್ಮಾಣದ ಹಿಂದಿನ ಉದ್ದೇಶ ಮನುಷ್ಯನ ಶ್ರಮ ಮತ್ತು ಕಾಲದ ಉಳಿತಾಯ. ಕೇವಲ ದೈಹಿಕ ಶ್ರಮದಿಂದ ಮಾಡಬೇಕಾಗಿದ್ದ ಕೆಲಸಗಳನ್ನು ಯಂತ್ರಗಳ ಮೂಲಕ ಶ್ರಮವಿಲ್ಲದೆ, ಕಡಿಮೆ ಕಾಲದಲ್ಲಿ ನಿರ್ವಹಿಸಬಹುದೆಂಬುದನ್ನು ಯೋಚಿಸಿದ ಮನುಷ್ಯ ಮೊದ ಮೊದಲು ನೇಗಿಲು, ಏತ, ರಾಟೆ, ಗಾಣ, ಚರಕ– ಮುಂತಾದ ಸರಳ ಉಪಕರಣಗಳನ್ನು ಸೃಷ್ಟಿಸಿದ; ಇಂಥ ಸಲಕರಣೆಗಳ ಬಳಕೆಯಲ್ಲಿ ಶಾರೀರಿಕ ಶಕ್ತಿಯೇ ಅಗತ್ಯವಾಗಿದ್ದುದರಿಂದ, ತೈಲ, ಕಲ್ಲಿದ್ದಲು, ವಿದ್ಯುತ್– ಮುಂತಾದ ಇಂಧನಗಳ ಸಹಾಯದಿಂದ ನಡೆಯುವ ಯಂತ್ರಗಳನ್ನು ನಿರ್ಮಿಸಲು ಪ್ರಾರಂಭಿಸಿದ ಪರಿಣಾಮವಾಗಿ, ನೀರೆತ್ತುವ ಏತದ ಬದಲು ಸ್ವಿಚ್ ಒತ್ತಿದೊಡನೇ ನೀರನ್ನು ಮೇಲಕ್ಕೇರಿಸುವ ಸ್ವಯಂಚಾಲಿತ ಪಂಪು, ಪ್ರಾಣಿಗಳು ಎಳೆದುಕೊಂಡು ಹೋಗುತ್ತಿದ್ದ ಗಾಡಿಗಳ ಬದಲು ಕಲ್ಲಿದ್ದಲು, ಪೆಟ್ರೋಲ್ ಮುಂತಾದ ಇಂಧನಗಳಿಂದ ಚಲಿಸುವ ವಾಹನಗಳು, ಕೈಮಗ್ಗದ ಬದಲಿಗೆ ವಿದ್ಯುತ್ ಚಾಲಿತ ಮಗ್ಗಗಳು– ಹೀಗೆ ವಿಧ ವಿಧ ಯಂತ್ರಗಳು ಕಾಣಿಸಿಕೊಂಡು, ಮನುಷ್ಯನ ದೈಹಿಕ ಶ್ರಮ, ಕೆಲಸದ ಕಾಲ– ಎರಡೂ ಹ್ರಸ್ವಗೊಂಡು, ಉತ್ಪಾದನಾ ಸಾಮರ್ಥ್ಯ ಹೆಚ್ಚುವಂತಾಯಿತು, ಯಂತ್ರಗಳ ಬಳಕೆ ಹೆಚ್ಚಿದಷ್ಟೂ ಮನುಷ್ಯನ ಯಂತ್ರಾವಲಂಬನಾ ಮನೋಭಾವವೂ ಹೆಚ್ಚುತ್ತಾ ಹೋಯಿತು. ಈ ಕಾಲಘಟ್ಟದ ಮನುಷ್ಯನಂತೂ ಯಂತ್ರಗಳ ದಾಸನಾಗಿದ್ದಾನೆ ಎಂದರೆ ತಪ್ಪಲ್ಲ. ಹಿಂದಿನ ಕಾಲದಲ್ಲಿ ನೂರಾರು ಮೈಲಿ ಕಾಲ್ನಡಿಗೆಯಲ್ಲೇ ಪ್ರಯಾಣ ಮಾಡುತ್ತಿದ್ದ ಮನುಷ್ಯ ಈಗ ಕೆಲವೇ ಕಿಲೋಮೀಟರ್ ಕ್ರಮಿಸಲೂ ವಾಹನಗಳನ್ನು ಬಳಸುತ್ತಾನೆ. ಈಗ ಬದುಕಿನ ಬಹಳಷ್ಟು ಕ್ಷೇತ್ರಗಳಲ್ಲಿ ಯಂತ್ರಗಳು ಅನಿವಾರ್ಯವೆನ್ನಿಸುವಂತಾಗಿದೆ. ಯಂತ್ರಗಳು ಕೆಟ್ಟುಹೋದರೆ ಅಥವಾ ಅವುಗಳ ಚಾಲಕ ಶಕ್ತಿಯಾಗಿರುವ ಇಂಧನಗಳ ಕೊರತೆ ಕಾಣಿಸಿಕೊಂಡರೆ, ಆಧುನಿಕ ಜಗತ್ತಿನ ಬಹುತೇಕ ಚಟುವಟಿಕೆಗಳು ಸ್ಥಗಿತಗೊಳ್ಳುತ್ತವೆ. ಸಾರ್ವಜನಿಕರು ಬಹಳಷ್ಟು ಬಳಸುವ ಅಂಚೆ ಕಚೇರಿ, ಬ್ಯಾಂಕ್ ಮುಂತಾದವುಗಳೂ ಈಗ ಕಂಪ್ಯೂಟರೀಕೃತವಾಗಿವೆಯಷ್ಟೆ? ಅಕಸ್ಮಾತ್ ಕಂಪ್ಯೂಟರ್‌ಗಳು ಕೆಟ್ಟುಹೋದರೆ, ಇಲ್ಲವೇ ವಿದ್ಯುತ್ ಕೈ ಕೊಟ್ಟರೆ, ಜನ ಸಾಮಾನ್ಯರು ಪರದಾಡಬೇಕಾಗುತ್ತದೆ.

ನಮ್ಮ ಯಂತ್ರದಾಸ್ಯದಿಂದಾಗುವ ಪರಿಣಾಮಗಳು ಒಂದೆರಡಲ್ಲ. ವಾಹನಗಳು ಉರಿಸುವ ಪೆಟ್ರೋಲ್ ಇತ್ಯಾದಿ ಇಂಧನಗಳಿಂದಾಗಿ ಅಪಾರ ಪ್ರಮಾಣದಲ್ಲಿ ಇಂಗಾಲಾಮ್ಲ ಬಿಡುಗಡೆಯಾಗಿ ಪರಿಸರವನ್ನು ಕಲುಷಿತಗೊಳಿಸುತ್ತದೆ. ಭೂಮಿಯ ತಾಪಮಾನ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದನ್ನು ವಿಜ್ಞಾನಿಗಳು ಗಮನಿಸುತ್ತಲೇ ಇದ್ದಾರೆ. ಕೃಷಿಗೆ ಆಧಾರವಾಗಿರುವ ನೀರಿನ ಸಲೆ ಬತ್ತಿಹೋಗುವುದಲ್ಲದೆ, ಮಿಥೇನ್ ಅನಿಲದ ಹೆಚ್ಚಳವಾಗಿ ವಾಯುಗೋಳ ವಿಷಯುಕ್ತವಾಗುತ್ತದೆ. ಮುಂದಿನ ಕೆಲವು ದಶಕಗಳಲ್ಲಿ ಮನುಷ್ಯ ಗುಟುಕು ನೀರಿಗೆ, ಉಸಿರಾಡುವ ಶುದ್ಧಗಾಳಿಗೆ ತಾಕಲಾಡುವ ಸಂದರ್ಭ ಎದುರಾಗಲಿದೆ ಎಂದು ವಿಜ್ಞಾನಿಗಳು ಎಚ್ಚರಿಸುತ್ತಲೇ ಇದ್ದಾರೆ.

ಗಾಂಧೀಜಿ ಮಿತಿಮೀರಿದ ಯಂತ್ರಗಳ ಬಳಕೆಯನ್ನು ಕಟುವಾಗಿ ವಿರೋಧಿಸುತ್ತಿದ್ದುದು ಇಂಥ ಹಲವು ಕಾರಣಗಳಿಂದಾಗಿ, ಯಂತ್ರ ಸಂಸ್ಕೃತಿ ಆರ್ಥಿಕ ಕ್ಷೇತ್ರದ ಮೇಲೆ ಮಾಡುವ ಪರಿಣಾಮವನ್ನು ಕುರಿತೂ ಅವರು ಚಿಂತಿಸಿದ್ದರು. ಶರೀರ ಶ್ರಮವನ್ನು ಕಡಿಮೆ ಮಾಡಿ, ಉತ್ಪಾದನೆಯನ್ನು ಹೆಚ್ಚು ಮಾಡುವ ಯಂತ್ರಗಳಿಂದಾಗಿ ಬಹಳಷ್ಟು ಮಂದಿ ನಿರುದ್ಯೋಗಿಗಳಾಗುತ್ತಾರೆ ಎಂದು ಎಚ್ಚರಿಸಿದ್ದರು ಗಾಂಧೀಜಿ. ಯಂತ್ರಗಳಿಂದ ನಡೆಯುವ ಕಾರ್ಖಾನೆಗಳು ಕೆಲವೇ ಕೆಲವರನ್ನು ಶ್ರೀಮಂತರನ್ನಾಗಿಸುತ್ತದೆ; ಪರಿಣಾಮವಾಗಿ ವರ್ಗಕಲಹಕ್ಕೆ ಅವಕಾಶವಾಗುತ್ತದೆ ಎಂಬುದು ಅವರ ಅಭಿಪ್ರಾಯವಾಗಿತ್ತು.

ಯಂತ್ರಯುಗದಲ್ಲಿ ಬದುಕುತ್ತಿರುವ ನಾವು ಭಾವನಾತ್ಮಕವಾಗಿಯೂ ಬಡವಾಗುತ್ತಿದ್ದೇವೆ; ಜಡವಾಗುತ್ತಿದ್ದೇವೆ. ನಮ್ಮ ಯಾಂತ್ರೀಕೃತ ಜೀವನ ಶೈಲಿಯಿಂದಾಗಿ, ನಮ್ಮಲ್ಲಿರುವ ಸಹಸ್ಪಂದನ ಹಾಗೂ ಸಂವಹನ ಕ್ಷಮತೆಯೂ ಕ್ಷೀಣಿಸುತ್ತಿವೆ. ನಮ್ಮ ಯಂತ್ರದಾಸ್ಯ ನಮ್ಮ ವ್ಯಕ್ತಿತ್ವದ ಆರ್ದ್ರತೆಯನ್ನು ನಾಶಮಾಡುತ್ತಿದೆ; ನಮ್ಮ ಭಾವ ಜಗತ್ತು ಶುಷ್ಕಗೊಳ್ಳುತ್ತಿದೆ!

■ ವೈನತೇಯ

## ಮಾತೇ ಮುತ್ತು

★ ನಿಜವಾದ ಶಿಕ್ಷಣವೆಂದರೆ ಮಾನವೀಯತೆಯ ವಿಕಾಸ.

–ಸ್ವಾಮಿ ವಿವೇಕಾನಂದ

★ ವಿಧೇಯನಾಗಿರಲು ಯಾವತ್ತೂ ಕಲಿಯದವನು ಉತ್ತಮ ಕಮಾಂಡರ್ ಆಗಲಾರ.

–ಅರಿಸ್ಟಾಟಲ್

★ ಬದುಕು ಮಾಯೆಯ ಮಾಟ,
ಮಾತು ನೊರೆ–ತೆರೆಯಾಟ
ಜೀವ ಮೌನದ ತುಂಬ ಗುಂಭ ಮುನ್ನೀರು
ಕರುಣೋದಯದ ಕೂಡ,
ಅರುಣೋದಯವು ಇರಲು
ಎದೆಯ ತುಂಬುತ್ತಲಿದೆ ಹೊಚ್ಚ ಹೊನ್ನೀರು!

–ದ.ರಾ.ಬೇಂದ್ರೆ

★ ಸಾವಿರಾರು ಜನರನ್ನು ಗೆಲ್ಲುವವನು ವೀರನಲ್ಲ, ಮನಸ್ಸನ್ನು ಗೆಲ್ಲುವವನು ವೀರ.

–ಗೌತಮ ಬುದ್ಧ

★ ಇಲ್ಲಿ ಯಾರೂ ಮುಖ್ಯರಲ್ಲ ; ಯಾರೂ ಅಮುಖ್ಯರಲ್ಲ; ಯಾವುದೂ ಯಃಕಶ್ಚಿತವಲ್ಲ.

–ಕುವೆಂಪು

★ ತನ್ನನ್ನು ತಾನು ಆಳಲಾರದವನು ಇತರರನ್ನು ಆಳುವುದು ಅಸಂಗತ.

–ಲ್ಯಾಟಿನ್ ಗಾದೆ

★ ಸ್ಮಿತವಿರಲಿ ವದನದಲಿ, ಕಿವಿಗೆ ಕೇಳಿಸದಿರಲಿ
ಹಿತವಿರಲಿ ವಚನದಲಿ, ಋತವ ಬಿಡದಿರಲಿ
ಮಿತವಿರಲಿ ಮನಸಿನುದ್ವೇಗದಲಿ, ಭೋಗದಲಿ
ಅತಿಬೇಡವೆಲ್ಲಿಯುಂ ಮಂಕುತಿಮ್ಮ.

–ಡಿ.ವಿ.ಗುಂಡಪ್ಪ

★ ನದಿ, ಪರ್ವತ, ನೀರು– ಹೀಗೆ ಯಾವುದು ನೋಡಲು ಸಿಕ್ಕರೂ ಅದು ಹರಿದರ್ಶನವೆಂದೇ ತಿಳಿಯಬೇಕು.

–ಭಾಗವತ

★ ನಾನು ಜನರನ್ನು ಹಿಂಬಾಲಿಸಬೇಕು, ಯಾಕೆಂದರೆ ನಾನು ಅವರ ನಾಯಕ.

–ಬೆಂಜಮಿನ್ ಡಿಸ್ರೇಲಿ

★ ಅತ್ಯುತ್ತಮ ನಾಯಕ ಯಾರೆಂದರೆ, ಆತ ಇರುವುದೇ ಜನರಿಗೆ ಗೊತ್ತಾಗಬಾರದು. ಆತ ಸಾಧನೆಯೊಂದನ್ನು ಮಾಡಿದಾಗ ಆ ದೇಶದ ಜನ ತಾವೇ ಆ ಸಾಧನೆ ಮಾಡಿದ್ದೇವೆಂದು ಭಾವಿಸಬೇಕು.

–ಲಾವೊ ತ್ಸು

★ ಯಾವತ್ತೂ ಪ್ರೀತಿಸದೇ ಇರುವುದಕ್ಕಿಂತ, ಪ್ರೀತಿಸಿ ಕಳೆದುಕೊಳ್ಳುವುದು ಮೇಲು.

–ಆಲ್‌ಫ್ರೆಡ್ ಟೆನಿಸನ್

★ ನಾನು ಹೆಚ್ಚು ಕಠಿಣ ಪರಿಶ್ರಮ ಪಟ್ಟಷ್ಟೂ, ಅದೃಷ್ಟವಂತನಾಗುವ ಅವಕಾಶಗಳು ಹೆಚ್ಚಿದವು.

–ಥಾಮಸ್ ಜಫರ್ಸನ್